## ಚಿಗಳಿಗಳ ಕೊಟ್ಟೆ

ಇದು ಚಿಗಳಿ ಇರುವೆಯ ಗೂಡು. ಮನೆಯ ಮುಂದಿರುವ ನೇರಳೆ ಮರದಲ್ಲಿ ಹಣ್ಣುಗಳನ್ನು ಕೀಳಲು ಹೋದಾಗ ಅಲ್ಲಿ ಹೇರಳವಾಗಿ ಚಿಗಳಿ ಇರುವೆಗಳು ಕಾಣಿಸಿದವು. ಇವುಗಳನ್ನು ಕೆಂಪಿರುವೆ ಎಂದೂ ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ 'ವೀವರ್ ಆ್ಯಂಟ್' ಎಂದು ಕರೆಯಲ್ಪಡುವ ಇವುಗಳ ವೈಜ್ಞಾನಿಕ ಹೆಸರು, 'ಓಕೋಫಿಲ್ಲಾ ಸ್ಮಾರಾಗ್ಡಿನಾ'. ಇವು ಕಚ್ಚಿದರೆ ಜೋರಾದ ಉರಿಯಾಗುತ್ತದೆ. ಹೀಗಾಗಿ, ಇವುಗಳಿಂದ ದೂರವಿರುವುದು ಸೂಕ್ತ ಎಂದು ಯೋಚಿಸುತ್ತಿದ್ದಾಗ ಇವು ಕಟ್ಟಿದ ಸುಂದರ ಗೂಡು ಕಾಣಿಸಿತು. ಇದಕ್ಕೆ 'ಚಿಗಳಿ ಕೊಟ್ಟೆ' ಎಂದೂ ಕರೆಯುತ್ತಾರೆ. ಮಲೆನಾಡಿನಲ್ಲಿ ಮಾಂಸಾಹಾರಿಗಳು ಈ ಚಿಗಳಿ ಇರುವೆಗಳ ಚಟ್ನಿಯನ್ನು ಮಾಡಿ ಸವಿಯುತ್ತಾರೆ. ಅತ್ಯುತ್ತಮ ಸಂಘಜೀವಿಗಳಾದ ಈ ಚಿಗಳಿ ಇರುವೆಗಳು ಎಲೆಯಿಂದ ಎಲೆಗೆ ದಾಟಲು ತಾವು ಸ್ರವಿಸುವ ದ್ರವದಿಂದ ಸೇತುವೆ ನಿರ್ಮಿಸಿಕೊಳ್ಳುತ್ತವೆ ಜೊತೆಗೆ ಎಲೆಗಳನ್ನು ಒಟ್ಟಾಗಿ ಸೇರಿಸಿ, ತಮ್ಮಲ್ಲಿರುವ ವಿಶೇಷ ದ್ರವವನ್ನು ಸ್ರವಿಸಿ ಗೂಡು ಕಟ್ಟುತ್ತವೆ.

—ಎಚ್.ಎಸ್. ನವೀನ ಕುಮಾರ್, ಹೊಸದುರ್ಗ



## ಬಂಡಿಯೋ... ಸ್ಕೂಟರ್ರೋ...



ಬೆಂಗಳೂರಿನ ಟಿನ್ ಫ್ಯಾಕ್ಟರಿ ಬಳಿಯ ಹೊರವರ್ತುಲ ರಸ್ತೆಯ ಮೇಲ್ಸೇತುವೆ ಸಾಗುವಾಗ ಹೊಸ ಅವತಾರದ 'ಸ್ಕೂಟರ್ ಬಂಡಿ' ಕಣ್ಣಿಗೆ ಬಿತ್ತು. ಈ ಬಂಡಿಯ ಸಾರಥಿಯಾಗಿದ್ದ ಮಹಿಳೆ, ಮೂವರನ್ನು ಕೂರಿಸಿಕೊಂಡು ಸಾಗುತ್ತಿದ್ದರು. ನಾಲ್ಕೈದು ಮಂದಿ ಕೂರಬಹುದಾದಷ್ಟು ದೊಡ್ಡದಿತ್ತು. ದೊಡ್ಡದಿದ್ದ ದುಡಿಮೆಗಾಗಿ ಈ ಮಹಿಳೆ ತನ್ನ ಸ್ಕೂಟರ್ ಅನ್ನು ಈ ರೀತಿ ಮಾರ್ಪಾಡು ಮಾಡಿಕೊಂಡು ದುಡಿಯುತ್ತಿರಬೇಕು ಎನಿಸಿತು. ಬೈಕ್ ಅಥವಾ ಸ್ಕೂಟರ್‌ನ ಹಿಂಭಾಗಕ್ಕೆ ಟ್ರಾಲಿ, ಟಿಲ್ಲರ್, ಮರದ ಬಂಡಿಯನ್ನು ಅಳವಡಿಸಿಕೊಂಡು ಸಾಗಾಟ ಮಾಡುತ್ತಿದ್ದುದ್ದನ್ನು ಕಂಡ ನನಗೆ ಮಹಿಳೆಯ ಸ್ಕೂಟರ್ ಬಂಡಿ ವಿನೂತನವಾಗಿ ಕಂಡಿತ್ತು. 'ಬಂಡಿ ಕ್ಯಾಬ್'ನಂತೆ ಕಂಡ ಇದನ್ನು ಒಂದು ವೇಳೆ ಸಾರಿಗೆ ಅಧಿಕಾರಿಗಳೋ, ಸಂಚಾರ ಪೊಲೀಸರೋ ನೋಡಿದ್ದರೆ, ಏನು ಮಾಡುತ್ತಿದ್ದರು ಎನ್ನುವ ಪ್ರಶ್ನೆ ತಕ್ಷಣಕ್ಕೆ ಕಾಡಿತ್ತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ





## ವಾಹನಗಳೇ ಬೀದಿನಾಯಿಗಳಿಗೆ ಆಸರೆ

ಮಹಾರಾಷ್ಟ್ರದ ನವಿ ಮುಂಬೈನಲ್ಲಿ ತಂಗಿರುವ ನಾನು ಹೀಗೆ ಒಂದಿನ ಸಂಜೆ ಸುತ್ತಾಟಕ್ಕೆ ಹೊರಹೋಗಿದ್ದೆ. ಆಗ ಬಹುತೇಕ ಕಡೆಗಳಲ್ಲಿ ಕಣ್ಣಿಗೆ ಬಿದ್ದದ್ದು ಬೀದಿ ನಾಯಿಗಳು. ಕಣ್ಣಿಗೆ ಬಿದ್ದ ಅಷ್ಟೂ ದಷ್ಟಪುಷ್ಟವಾಗಿದ್ದವು. ಸಾಮಾನ್ಯವಾಗಿ ಬಿರುಬಿಸಿಲಿನಲ್ಲಿ ಮರಗಳ ಅಡಿಯಲ್ಲಿ ವಿಶ್ರಮಿಸುವ ಬೀದಿನಾಯಿಗಳು ಇಲ್ಲಿ ವಾಹನಗಳ ಕೆಳಗೆ ಹೆಚ್ಚಾಗಿ ಕಂಡದ್ದನ್ನು ಸೂಕ್ಷ್ಮವಾಗಿ ಗಮನಿಸಿದೆ. ಬಹುಶಃ ಇದಕ್ಕೆ ಕಾರಣ, ಇಲ್ಲಿ ಮರಗಿಡಗಳು ಅಷ್ಟಾಗಿ ಇಲ್ಲದಿರುವುದು.

ದಾವಣಗೆರೆಯಲ್ಲಿ ನಾನು ಕಂಡಂತೆ ನಾಯಿಗಳು, ಹಂದಿಗಳು ಮತ್ತು ಅವುಗಳ ಮರಿಗಳದ್ದು ವಿಪರೀತ ಕಾಟ. ಆದರೆ, ನವಿ ಮುಂಬೈಯಲ್ಲಿ ಬೀದಿನಾಯಿಗಳು ಹೆಚ್ಚಾಗಿ ಕಂಡರೂ ದಾರಿಹೋಕರಿಗೆ ಕಾಟ ಕೊಡುವುದು ಕಾಣಿಸಲಿಲ್ಲ. ವಾಹನಗಳ ಕೆಳಗೆ ನಾಯಿಗಳೇನಾದರೂ ವಿಶ್ರಮಿಸುತ್ತಿದ್ದರೆ, ಅವು ಪಕ್ಕಕ್ಕೆ ಹೋಗಲಿ ಎಂದು ಇಲ್ಲಿನ ಕಾರು ಅಥವಾ ಆಟೊ, ಟೆಂಪೊ ಟ್ರಾವೆಲ್ಲರ್, ಲಾರಿ ಚಾಲಕರು ಗಾಡಿ ಸ್ಟಾರ್ಟ್ ಮಾಡುವ ಮುನ್ನ ಜೋರಾಗಿ ಹಾರ್ನ್ ಮಾಡುವುದು ಸಹಜವಾಗಿತ್ತು.

—ಅನುರಾಧ ಟಿ., ದಾವಣಗೆರೆ



